J.S.S. Banashankari Arts, Commerce & Shantikumar Gubbi Science College
Vidyagiri
DHARWAD-04.

ಅಂಕಣ – ಎರಡು

# ತಲ್ಲಣಿಸದಿರು ಕಂಡು ತಾಳು.......!

## ಓದು

• ಡಾ. ಆರ್. ವ್ಹಿ. ಪಾಟೀಲ

ನಾನು ಇಡೀ ದಿನ ಕುಳಿತು ಒಂದು ಪುಸ್ತಕ ಓದಿ ಮುಗಿಸಿದೆ. ತುಂಬಾ ಒಳ್ಳೆಯ ಪುಸ್ತಕ ಎಂದು ಕಾಫಿ ಹೀರುತ್ತಾ ಗೆಳೆಯನಿಗೆ ಹೇಳಿದೆ. ಆಗ ಗೆಳೆಯ ಕೇಳಿದ ಯಾರು ಬರೆದ ಪುಸ್ತಕವನ್ನು ಓದಿದೆ ಎಂದು. ನನಗೆ ಆಶ್ಚರ್ಯ ಯಾವ ಪಸ್ತಕವೆಂದು ಕೇಳಲಿಲ್ಲ. ಯಾರು ಬರೆದದ್ದು ಎಂದು ಕೇಳಿದನಲ್ಲ ಎಂದು. ಅಂದರೆ ಒಂದು ಪುಸ್ತಕದ ಘನತೆ ಬರೆದ ಲೇಖಕರ ಮೇಲು ಇರುತ್ತದೆ ಎನ್ನುವುದು ನನಗೆ ಗೆಳೆಯನ ಮಾತಿನಿಂದ ಸ್ಪಷ್ಟವಾಯಿತು. ನಾನು ಹೇಳಿದೆ ನಾನು ಓದಿದ ಪುಸ್ತಕ ಬರೆದವರು ಎಸ್. ಎಲ್. ಬೈರಪ್ಪನವರ 'ಯಾನ' ಎಂದು. ಓಹೋ ಸೂಪರ್ ಬೈರಪ್ಪನವರ ಪುಸ್ತಕ ಓದುವವರು ತುಂಬಾ ವಿಭಿನ್ನವಾಗಿರುತ್ತಾರೆ ನೋಡು ಎಂದು ಮಾತಿಗಾರಂಭಿಸಿದ.

ನಾವು ಪಿಯುಸಿ ಓದುವಾಗ ರಜೆ ದಿನಗಳಲ್ಲಿ 'ಕಾನೂರ ಹೆಗ್ಗಡತಿ', ಮಲೆಗಳಲ್ಲಿ 'ಮದುಮಗಳು' ಓದಿ ಪತ್ರದಲ್ಲಿ ಅದರ ಕುರಿತು ಬರೆದಿದ್ದೆ. ಹಾಗೆ ಪ್ರತಿವರ್ಷ ಬಿ. ಎ. ರಜೆಯಲ್ಲಿ ಒಂದೊಂದು ಮಹಾಕಾವ್ಯ ಪಂಪಭಾರತ, ಗದಾಯುದ್ಧದಿಂದ ಹಿಡಿದು ಕುವೆಂಪುರವರ 'ರಾಮಾಯಣ ದರ್ಶನಂ' ದವರೆಗೂ ಸುಮಾರು ಕಾವ್ಯಗಳನ್ನು ಓದಿದೆ. ಆ ಓದಿನ ಆತ್ಮತೃಪ್ತಿ ಇಂದಿಗೂ ನನ್ನನ್ನು ಸಂತೋಷ ಹಾಗೂ ಜೀವಂತಿಕೆಯಿಂದ ಇಡುತ್ತಿದೆ. ಯಾಕೋ ಏನೋ ಹೀಗೆ ನಾನು-ನೀನು ಕೂಡಿದಾಗ ಮಾತ್ರ ಓದು, ಪುಸ್ತಕ, ಕಾವ್ಯ ಅಂತ ಮಾತಾಡತೇವಿ. ಇತ್ತೀಚಿನ ಹೊಸ ಪೀಳಿಗೆಯವರು ನಮ್ಮ ಸಾಹಿತ್ಯ ಓದುವ ಯಜಮಾನರು ಆದರೆ ಇಂದು ಮನಸ್ಸುಗಳಿಗೆ ನಿತ್ಯ ಓದಿನ ಕಡೆ ಗಮನವಿಲ್ಲ. ಆ ಕುರಿತು ಮಾತನಾಡುವುದಿಲ್ಲ. ಈ ಓದಿನ ಕುರಿತು ಮಾತನಾಡುವುದೇ ಒಂದು ದರಿದ್ರತನ ಅನ್ನುವಂತೆ, ಬಯ್ಯುವವರೆ ಹೆಚ್ಚಾಗಿರುವಂತೆ ನನಗೆ ಭಾಸವಾಗುತ್ತದೆ. ಎನ್ನುವ ಗೆಳೆಯನ ಮನಸ್ಸನ್ನು ನೋಡಿ ನನಗೆ ಮರುಕವೆನಿಸಿತು. ನಿನ್ನ ಚಡಪಡಿಕೆ ಮನಸ್ಥಿತಿ, ನೋವು, ಹತಾಶೆ ನನಗೆ ಅರ್ಥವಾಗುತ್ತದೆ. ಇಂದೂ ನಮಗಿಂತ ಹೆಚ್ಚು ಓದುವವರಿದ್ದಾರೆ. ನಮ್ಮ ಸಂಪರ್ಕಕ್ಕೆ ಬಂದಿಲ್ಲವಷ್ಟೆ.

ಇನ್ನು ವಿದ್ಯಾರ್ಥಿಗಳು ಅವರಿಗೆ ಸಮಯದ ಅಭಾವ, ಒತ್ತಡ, ನಿಶ್ಚಿತ ಗುರಿಯಿಲ್ಲದಿರುವುದು, ಸರಿಯಾದ ಮಾರ್ಗದರ್ಶನವಿಲ್ಲ. ಯಾವ ವಿಷಯದ ಬಗ್ಗೆ ಗಂಭೀರತೆ ಇಲ್ಲ. ಯಾವುದು ಶ್ರೇಷ್ಠ ಎಂಬ ಸಕಾರಾತ್ಮಕ ಆಲೋಚನೆ ಇಂದು ಬೆಳೆಯುತ್ತಿಲ್ಲ. ಈಗೊಂದು ಹೊಸ ಜಗತ್ತು ನಿರ್ಮಾಣವಾಗುತ್ತಿದೆ. ಅದಕ್ಕೆ ನನ್ನಂಥ ಶಿಕ್ಷಕನಿಂದ ಹಿಡಿದು ತಂದೆ-ತಾಯಿ-ಸಮೂಹ ಮಾಧ್ಯಮಗಳು, ಗೆಳೆಯರ ಬಳಗ, ಸಂಕ್ರಮಣದ ಜಾತ್ರೆಯಂತೆ ವಿಜೃಂಭಿಸುವ ಶೈಕ್ಷಣಿಕ ಕ್ಯಾಂಪಸ್ಸಗಳು, ಮೊಬೈಲ ಬಳಕೆ ವೈಭವೀಕರಣದ ಜೀವನ, ಸಿನಿಮಾ ಹಿರೋಗಳ ಹಾವಳಿ, ವಿಚಿತ್ರವಾದ ಗೆಳತಿ-ಗೆಳೆಯರು ಏನೆಲ್ಲಾ ಕಾರಣವಾಗಿ ಓದುವ ತಾಳ್ಮೆ ಇಲ್ಲವಾಗುತ್ತಿದೆ. ನೀ ಹೇಳುವುದು ನಿಜ. ಓದು ಒಂದು ತಪಸ್ಸು. ಅದಕ್ಕೆ ತಾಳ್ಮೆ ಇದ್ದಾಗ ಓದು ಸಿದ್ಧಿಸಲು



PRINCIPAL
J.S.S Banashankari Arts, Commerce &
Shantikumar Gubbi Science College,
DHARWAD - 580 004.